

ಇದಾದ ನಂತರ ನಾಯಿಯನ್ನು ಉತ್ತಮ ಈಜುಗಾರನನ್ನಾಗಿ ಮಾಡಬೇಕೆಂಬ ಬಯಕೆ ಬೆಕ್ಕಿಗೆ ಉಂಟಾಯಿತು. ಅದಕ್ಕಾಗಿ ದಿನವೂ ನದಿಗೆ ಕರೆದುಕೊಂಡು ಹೋಗಿ ನಾಯಿಗೆ ಈಜಿನ ಹಲವು ತಂತ್ರಗಳನ್ನು ಹೇಳಿಕೊಟ್ಟಿತು. ಇದರಿಂದ ನಾಯಿ ನುರಿತ ಈಜುಗಾರನಾಯಿತು. ಹೀಗೇ ಬೆಕ್ಕು ತನಗೆ ಯಾವೆಲ್ಲಾ ವಿದ್ಯೆಗಳು ಗೊತ್ತೋ ಆ ಎಲ್ಲ ವಿದ್ಯೆಗಳನ್ನು ನಾಯಿಗೆ ಧಾರೆಯೆರೆಯಿತು.

ನಾಯಿಗೆ ಎಲ್ಲಿಲ್ಲದ ಹೆಮ್ಮೆ ಮತ್ತು ಇಡೀ ಕಾಡಿನಲ್ಲಿ ತನ್ನಷ್ಟು ವಿದ್ಯಾವಂತ ಯಾರಿದ್ದಾರೆ ಎನ್ನುವ ಗರ್ವ ಮೂಡಿತು. ಒಂದು ದಿನ ಬೆಕ್ಕು ಮತ್ತು ನಾಯಿಗೆ ಚಿಕ್ಕ ಕಾರಣಕ್ಕಾಗಿ ಮನಸ್ತಾಪವಾಯಿತು. ನಾಯಿ ಬೆಕ್ಕನ್ನು ಅಟ್ಟಿಸಿಕೊಂಡು ಹೋದಾಗ ಬೆಕ್ಕು ಮರವೇರಿ ಕುಳಿತುಕೊಂಡಿತು. ಆಗ ನಾಯಿಗೆ ತನಗೆ ಈ ವಿದ್ಯೆ ಗೊತ್ತೇ ಇಲ್ಲ ಎಂಬುದರ ಅರಿವಾಯಿತು. ಅದು ಬೆಕ್ಕನ್ನು ಕೇಳಿತು– 'ನೀನು ನನಗೇಕೆ ಮರ ಹತ್ತುವ ವಿದ್ಯೆ ಹೇಳಿಕೊಡಲಿಲ್ಲ?'

'ನನ್ನ ಆತ್ಮ ರಕ್ಷಣೆಗಾಗಿ ಒಂದು ವಿದ್ಯೆಯನ್ನು ನಾನು ನನ್ನಲ್ಲೇ ಇಟ್ಟುಕೊಂಡಿದ್ದೆ...' ಎಂದಿತು ಬೆಕ್ಕು. ಅಂದಿನಿಂದ ನಾಯಿ ಬೆಕ್ಕು ಪರಸ್ಪರ ವೈರಿಗಳಾಗಿವೆ.

(ಸಂಗ್ರಹ)